ಅ) ಈ ಯೋಜನೆಯಿಂದ ರಾಜ್ಯದಲ್ಲಿ ಪ್ರಯೋಜನ ಪಡೆದಿರುವವರ ಸಂಖ್ಯೆ ಎಷ್ಟು (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು).

ಇ) ಈ ಯೋಜನೆಯಡಿಯಲ್ಲಿನ ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಮೀಟರನ್ನು ಅಳವಡಿಸಲಾಗಿದೆಯೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಭಾಗ್ಯ ಜ್ಯೋತಿ ಯೋಜನೆಯನ್ವಯ ಸಮಾಜದಲ್ಲಿ ದುರ್ಬಲ ವರ್ಗದವರಿಗೆ ಮನೆಗೊಂದು ವಿದ್ಯುದ್ದೀಪವನ್ನು ಒದಗಿಸಲಾಗುತ್ತದೆ. ಈ ಫಲಾನುಭವಿಗಳನ್ನು ಮಂಡಲ ಪಂಚಾಯ್ತಿ ಜಿಲ್ಲಾ ಪರಿಷತ್ತಿನವರು ಗುರುತಿಸುವರು. ಹಾಲಿ ಒಟ್ಟು ಫಲಾನುಭವಿಗೆ ೪೦೦-೦೦ರೂ.ಗಳಷ್ಟು ವೆಚ್ಚ ಮಾಡಲಾಗುತ್ತದೆ. ಇದರಲ್ಲಿ ಶೇ. ೨೦ ರಷ್ಟನ್ನು ರಾಜ್ಯ ಸರ್ಕಾರ ಸಹಯ ಧನವನ್ನಾಗಿ ಮಂಡಳಿಗೆ ನೀಡುತ್ತದೆ. ಉಳಿದ ಹಣವನ್ನು ಫಲಾನುಭವಿಗಳು ೧೫ ವರ್ಷಗಳ ಅವಧಿಯಲ್ಲಿ ಮಾಹೆಯಾನ ರೂ. ೨.೬೦ (ಅಸಲು ಮತ್ತು ಬಡ್ಡಿ ಸೇರಿ) ಗಳನ್ನು ಮಾಸಿಕ ವಿದ್ಯುತ್ ಬಳಕೆಯ ಬಾಬ್ತು ರೂ. ೨.೫೦ ಕೂಡ ಮಂಡಳಿಗೆ ಪಾವತಿ ಮಾಡಬೇಕು. ಪರಿಶಿಷ್ಟ ಜಾತಿ ಮಂತ್ತು ಪರಿಶಿಷ್ಟ ವರ್ಗದವರಿಗೆ ಆದ್ಯತೆ ನೀಡಲಾಗುತ್ತದೆ ಹಾಲಿ ಶೇ ೬೦ ರಷ್ಟು ಫಲಾನುಭವಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದಾರೆ.

ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯ ಫಲ ಪಡೆದವರ ಸಂಖ್ಯೆ ಕೆಳಕಂಡಂತೆ ಇದೆ.

೧೯೮೪-೮೫	—	೫೧,೧೬೫
೧೯೮೫-೮೬	—	೨೫,೫೭೧
೧೯೮೬-೮೭	—	೪೮,೯೬೧

ಇ) ಇಲ್ಲ.

• ಸಿಮೆಂಟ್ ಫ್ಯಾಕ್ಟರಿಗಳ ಹಣದ ರೂಪದ ಅಗ್ರಿಮೆಂಟ್‌ಗಳು

೯೯೧. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಸಿಮೆಂಟ್ ಕಾರ್ಖಾನೆಗಳಿವೆ ?

ಆ) ಅವುಗಳು ಯಾವ ಯಾವ ಮಂಡಲ್ ಪಂಚಾಯಿತಿಗೆ ಸೇರಿವೆ ?

ಇ) ಮಂಡಲ್ ಪಂಚಾಯಿತಿ ಶಾಸನದ ಪ್ರಕಾರ ಆಯಾ ಮಂಡಲ್ ಪಂಚಾಯಿತಿಗಳು ಮಾಡಿಕೊಂಡಿರುವ ಹಣದ ರೂಪದ ಅಗ್ರಿಮೆಂಟ್‌ಗಳು ಸರ್ಕಾರದ ಗಮನದಲ್ಲಿದೆಯೇ ?

ಈ) ಹಾಗಾದರೆ ಯಾವ ಯಾವ ವ್ಯಕ್ತಿಗಳು ಯಾವ ಯಾವ ಮಂಡಲ್ ಪಂಚಾಯಿತಿಗಳಿಗೆ ಹಣವನ್ನು ಕೊಟ್ಟಿರುವುದು ಮತ್ತು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೫ ಮಧ್ಯಮ ಪ್ರಾಗೂ ಒಂದು ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳಿವೆ.

ಆ) ಮಂಡಲ್ ಪಂಚಾಯಿತಿಯ ವಿವರಗಳು ಇಲ್ಲದೆ ಇರುವುದರಿಂದ ಕಾರ್ಯಸ್ಥಾನ ಸ್ಥಳ ಮತ್ತು ತಾಲ್ಲೂಕುಗಳ ವಿವರಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಇ) ಗಮನಕ್ಕಿದೆ.

ತಮ್ಮ ಉತ್ಪಾದನಾ ಸಾಮರ್ಥ್ಯಕ್ಕೆ ತಕ್ಕಂತೆ ಪಂಚಾಯಿತಿಗಳಿಗೆ ಪರಿಹಾರ ನೀಡಲು ಒಪ್ಪಿಗೆ ನೀಡಿ ಈ ಕಂಪನಿಗಳು ಸರ್ಕಾರಕ್ಕೆ ಮುಚ್ಚಳಿಕೆ ನೀಡಿವೆ.

ಈ) ವಿವರಗಳು ಲಭ್ಯವಿಲ್ಲ.

ಅನುಬಂಧ

ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಣ್ಣ ಮಧ್ಯಮ ಪ್ರಮಾಣದ ಸಿಮೆಂಟ್ ಘಟಕಗಳು

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ಕಾರ್ಯಸ್ಥಾನ	ಉತ್ಪಾದನಾ ಪ್ರಮಾಣ	ಕೈಗಾರಿಕೆ ಪ್ರಾರಂಭಗೊಂಡ ದಿನಾಂಕ
೧	ಶಿವಾ ಮಿನರಲ್ಸ್ ಅಂಡ್ ಸಿಮೆಂಟ್ ಇಂಡಸ್ಟ್ರೀಸ್ ಕಂಚೀಪುರ	ಕಂಚೀಪುರ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	೧೦೦ ಟನ್ ದಿನಕ್ಕೆ	೧೮-೧೨-೮೫
೨	ಲೋಖಂಡವಾಲಾ ಸಿಮೆಂಟ್ಸ್ ಪ್ರೈ.ಲಿ. ಇಟ್ಟಿಗೆಹಳ್ಳಿ, ಹೊಸದುರ್ಗ, ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ	ಇಟ್ಟಿಗೆಹಳ್ಳಿ, ಹೊಸದುರ್ಗ ತಾಲ್ಲೂಕ್ ಚಿತ್ರದುರ್ಗ ಜಿಲ್ಲೆ	೧೦೦ ಟನ್ ದಿನಕ್ಕೆ	೧೯-೧೦-೮೫
೩	ಕರ್ನಾಟಕ ಸಿಮೆಂಟ್ಸ್ ಅಂಡ್ ಮಿನರಲ್ಸ್ ಲಿಮಿಟೆಡ್, ಮತಾಡು ಹತ್ತಿರ.	ಮತಾಡು ಹತ್ತಿರ ಹೊಸದುರ್ಗ ತಾಲ್ಲೂಕ್ ಚಿತ್ರದುರ್ಗ ಜಿಲ್ಲೆ	೨೦೦ ಟನ್ ದಿನಕ್ಕೆ	೧೧-೧೨-೮೫
೪	ವೇದಾ ಸಿಮೆಂಟ್ಸ್ ಲಿಮಿಟೆಡ್ ಮಾಡದಕೆರೆ, ಚಿತ್ರದುರ್ಗ ಜಿಲ್ಲೆ	ಮಾಡದಕೆರೆ, ಹೊಸದುರ್ಗ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ	೧೦೦ ಟನ್ ದಿನಕ್ಕೆ	ಹಾಲಿ
೫	ರೆಯಾನ್ ಸಿಮೆಂಟ್ಸ್, ಕಾದುರೆ ಕಣಿವೆ, ಹೊಸದುರ್ಗ ತಾಲ್ಲೂಕ್.	ಕಾದುರೆ ಕಣಿವೆ, ಹೊಸದುರ್ಗ ತಾಲ್ಲೂಕ್ ಚಿತ್ರದುರ್ಗ ಜಿಲ್ಲೆ	೨೦೦ ಟನ್ ದಿನಕ್ಕೆ	ಪರೀಕ್ಷಾರ್ಥ ಉತ್ಪಾದನೆಯನ್ನು ಪ್ರಾರಂಭಿಸಿದ ಹಂತದಲ್ಲಿದೆ.
೬	ಮೆ. ಮಾರಿಸ್ ಸಿಮೆಂಟ್ಸ್ ಪ್ರೈ. ಲಿಮಿಟೆಡ್, ದೊಡ್ಡಬೈಲಾಡಕೆರೆ, ಹೊಸದುರ್ಗ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.	ಕಾದುರೆ ಕಣಿವೆ, ಕಾವಲ್	೬೭೫೦ ಮೆ. ಟನ್ ವರ್ಷಕ್ಕೆ	ಕಾರ್ಯಾಗಾರ ಪ್ರಾರಂಭವಾಗಿದೆ.